ಶ್ರೀ ಎಸ್. ಶಿವಪ್ಪ.—ಮಾನ್ಯ ಗಂಗಾಧರ್ ಅವರು ಏನು ವಿಷಯವನ್ನು ತಂದಿದ್ದಾರೆ ಅದು ಇಡೀ ದೇಶಕ್ಕೇ ವ್ಯಾಪಕವಾಗಿದೆ. ಬೇರೆ ಕಡೆಗಳಲ್ಲಿಯೂ ಅದೇ ರೀತಿ ಇದೆ. ಇದನ್ನು ಕೂಡ ಅಧ್ಯಕ್ಷರು ಯೋಚನೆ ಮಾಡಬೇಕು.

ಶ್ರೀ ಬಿ. ಪಿ. ಗಂಗಾಧರ್.—ಈಗ ಪರಿಸ್ಥಿತಿ ಏನಾಗಿದೆ ಎಂದರೆ ಎಲ್ಲ ರೆವೆನ್ಯೂ ಇನ್‌ಸ್ಪೆಕ್ಟರು ಗಳೂ ಹಳ್ಳಿಗಳಿಗೆ ಹೋಗಿದ್ದಾರೆ. They have been taking the assistance of police to see that land revenue is paid. ನಾಲ್ಕು ವರ್ಷದಿಂದ ಸಸ್‌ಪೆಂಡ್ ಮಾಡಿ ಕೊಂಡು ಬಂದರು. ಸಾರ್ವತ್ರಿಕ ಚುನಾವಣೆಗಳಾದುವು, ತಾಲ್ಲೂಕು ಬೋರ್ಡ್ ಚುನಾವಣೆ ಗಳಾದುವು. ಅದಕ್ಕಾಗಿ ಸಸ್‌ಪೆಂಡ್ ಮಾಡಿಕೊಂಡು ಬಂದರು. ಈಗ ನಾಲ್ಕು ವರ್ಷದ್ದೂ ಒಟ್ಟಿಗೇ ಕೊಡಿ ಎಂದು ಕೇಳುತ್ತಾರೆ. ಹಳ್ಳಿಗಳಲ್ಲಿ ರೈತರು ಉಳಿಯುವ ಹಾಗೆ ಇಲ್ಲ. It is a very serious matter and it is a very urgent matter. This may kindly be taken up.

Grant of Compensation to victims of Siva Sena excesses in Bombay

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಮಾನ್ಯ ಅಧ್ಯಕ್ಷರೇ, ಈವೊತ್ತಿನ ದಿನದ ಪತ್ರಿಕೆಗಳಲ್ಲಿ ಮಾನ್ಯ ಮುಖ್ಯ ಮಂತ್ರಿಯವರಿಗೆ ನಮ್ಮ ಪ್ರಧಾನ ಮಂತ್ರಿಗಳಾದ ಇಂದಿರಾ ಗಾಂಧಿಯವರು ಮತ್ತು ಮುಂಬೈ ರಾಜ್ಯದ ಮುಖ್ಯ ಮಂತ್ರಿಯವರಾದ ಪಿ. ಪಿ. ನಾಯಕ್ ಅವರು ಒಂದು ಪತ್ರ ಬರೆದು ಶಿವಸೇನೆ ಗಲಭೆಯ ಸಂತ್ರಸ್ತರಿಗೆ ಪರಿಹಾರವನ್ನು ನೀಡುವ ಪ್ರಶ್ನೆ ಉದ್ಭವವಾಗುವುದಿಲ್ಲ, ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಶಿವ ಸೇನೆಯ ಗಲಭೆ ವಿಚಾರದಲ್ಲಿ ಈ ಮನೆಯಲ್ಲಿ ಚರ್ಚೆಯಾದಾಗ ಅದಕ್ಕೆ ಉತ್ತರ ಕೊಡುತ್ತ, ಕನ್ನಡಿ ಗರು ಎಲ್ಲೇ ಇರಲಿ, ಅವರ ಆಗುಹೋಗುಗಳಲ್ಲಿ ನಾನು ಸಂಪೂರ್ಣ ಜವಾಬ್ದಾರಿಯಾಗಿದ್ದೇನೆ, ಅವರಿಗೆ ಪರಿಹಾರ ಕೊಡುವ ವಿಷಯದಲ್ಲಿ ಕೂಡ ಸರ್ಕಾರ ಆಲೋಚನೆ ಮಾಡುತ್ತಿದೆ. ಒಂದು ವೇಳೆ ಅಲ್ಲಿಯ ಸರ್ಕಾರದವರು ಪರಿಹಾರ ಕೊಡದೆ ಇದ್ದರೆ ಆ ವಿಷಯದಲ್ಲಿ ಏನು ಮಾಡಬೇಕು ಎಂಬು ದನ್ನು ನೋಡುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಕನ್ನಡಿಗರ ಸುಮಾರು 57 ಉಡುಪಿ ಹೋಟೆಲುಗಳಿಗೆ ನಷ್ಟವಾಗಿದೆ, ಅವನ್ನು ಸುಟ್ಟಿದ್ದಾರೆ. ಸಾಧಾರಣವಾಗಿ 2 ಕೋಟಿಗೆ ಮೇಲ್ಪಟ್ಟು ನಷ್ಟವಾಗಿದೆ, ಈ ಬಗ್ಗೆ ದಿನವೂ ಕಾಗದ ಮತ್ತು ಟೆಲಿಗ್ರಾಂ ಬರುತ್ತಿದೆ, ಮುಂಬಯಿನಲ್ಲಿರುವ ನಮ್ಮ ಕನ್ನಡಿಗರು ಬೀದಿ ಭಿಕ್ಷಾರಿಗಳಾಗಿದ್ದಾರೆ. ಸರಕಾರದ ನಿರ್ದಿಷ್ಟವಾದ ನಿಲುವನ್ನು ಈ ಮಾನ್ಯ ಸಭೆಗೆ ತಿಳಿಸಬೇಕು, ಸಂತ್ರಸ್ತರಿಗೆ ಪರಿಹಾರ ಕೊಡುವುದರ ಬಗ್ಗೆ ಸರ ಕಾರದ ನಿಲುವನ್ನು ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ತಿಳಿಸಬೇಕೆಂದು ಅಧ್ಯಕ್ಷರು ಹೇಳಬೇಕು, ಹೇಳಿ ಮುಖ್ಯ ಮಂತ್ರಿಗಳಿಂದ ಈ ವಿಚಾರದಲ್ಲಿ ಒಂದು ಹೇಳಿಕೆ ಕೊಡಿಸಬೇಕು ಎಂದು ಒತ್ತಾಯ ಮಾಡುತ್ತೇನೆ.

Sri B. P. GANGADHAR.—In this connection, the Prime Minister has categorically stated that payment of compensation to those who suffered in the recent Shiv Sena violence in Bombay, does not arise.

ಅಧ್ಯಕ್ಷರು.—ಅದು ಎಲ್ಲರಿಗೂ ಗೊತ್ತೇ ಇದೆ.

ಶ್ರೀ ಎಸ್. ಚನ್ನಯ್ಯ.—ನನ್ನ ಸೂಚನೆಯೇನಾಗಿದೆ?

ಅಧ್ಯಕ್ಷರು.—ನೋಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಶ್ರೀ ಭಾಸ್ಕರಶೆಟ್ಟರು ಎತ್ತಿರುವ ವಿಷಯ ಬಹಳ ಗಹನವಾದುದು.

ಅಧ್ಯಕ್ಷರು.—ಇಂದು ಚರ್ಚೆಗೇನು ವಿಷಯವಿದೆ ಅದನ್ನು ಮೊದಲು ತೆಗೆದುಕೊಳ್ಳೋಣ. ರೂಲ್ 312ರ ಪ್ರಕಾರ ನೋಟೀಸ್ ಕೊಡಿ ಎಂದು ಹೇಳಿದ್ದೇನೆ. ಸರಕಾರವಾದರೂ ಸಮಾ ಚಾರ ತರಿಸಿಕೊಂಡು ವಿಚಾರಮಾಡಿ ಹೇಳಬೇಕಾಗುತ್ತದೆ. ಈಗಲೇ ಉತ್ತರ ಕೊಡಿ ಎಂದು ಹೇಳು ವುದಕ್ಕಾಗುತ್ತದೆಯೇ?

Sri S SIVAPPA.—I only request the Government to give a reply on this point specifically while replying on the Budget Debate.

ಅಧ್ಯಕ್ಷರು.—ಅದಕ್ಕೆ ಒಂದು ಪ್ರೊಸೀಜರ್ ಏನಿದೆ ಅದನ್ನು ಅನುಸರಿಸಬೇಕು. ಬರೆದು ಕೊಟ್ಟರೆ ನಾನು ಅದನ್ನು ಸರಕಾರಕ್ಕೆ ಕಳಿಸಿಕೊಡುತ್ತೇನೆ. ನಂತರ ಸರಕಾರದವರು ಉತ್ತರ ಕೊಡುತ್ತಾರೆ.

ಶ್ರೀ ಪಾಟಾಳ್ ನಾಗರಾಜ್.—ಶ್ರೀ ಭಾಸ್ಕರಶೆಟ್ಟರು ಹೇಳುವುದು ಬಹಳ ಪ್ರಾಮುಖ್ಯವಾದ ವಿಚಾರ. ಅವರು ತೊಂದರೆಯಾಗಿರುವುದನ್ನು ಗಮನಕ್ಕೆ ತಂದರು. ತಾವು ನಿಧಾನಮಾಡ ಬಾರದು, ಅತಿ ಶೀಘ್ರವಾಗಿ ಸರಕಾರ ಈ ವಿಚಾರದಲ್ಲಿ ಹೇಳಿಕೆ ಕೊಡುವಂತೆ ಒತ್ತಾಯಮಾಡ ಬೇಕು. ರೂಲ್ 63ರ ಪ್ರಕಾರ ನಾನೊಂದು ಸೂಚನೆ ಕಳಿಸಿದ್ದೆ. ಅದೇನಾಯಿತು ಎಂಬುದು ಗೊತ್ತಿಲ್ಲ. ಲೋಕಸಭೆಯಲ್ಲಿ ಪ್ರಧಾನಮಂತ್ರಿಗಳು ಮಹಾಜನ್ ವರದಿಯ ಬಗ್ಗೆ ಹೇಳಿಕೆ ಕೊಟ್ಟಿರುವ ಬಗ್ಗೆ ರೂಲ್ 63ರ ಪ್ರಕಾರ ನಾನು ಸೂಚನೆ ಕೊಟ್ಟಿದ್ದೆ. ಅದರ ವಿಚಾರ ಗೊತ್ತಾಗಲಿಲ್ಲ.

ಅಧ್ಯಕ್ಷರು.—ತಮಗೆ ಉತ್ತರ ಬಂದಿಲ್ಲವೆ ?

ಶ್ರೀ ಪಾಟಾಳ್ ನಾಗರಾಜ್.—ಇಲ್ಲ.

ಅಧ್ಯಕ್ಷರು.—ಪ್ರೆಸ್‌ನಲ್ಲಿ ಬರುವುದನ್ನು ತೆಗೆದುಕೊಂಡು ಕಾರ್‌ಅಚೆನ್‌ಷನ್ ನೋಟೀಸ್ ಕೊಡುವುದಕ್ಕೆ ಬರುವುದಿಲ್ಲ. ಸರಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ, ಮಹಾಜನ್ ಕಮಿಷನ್ ವರದಿಯೇನಿದೆ ಅದನ್ನು ಇರುವ ಹಾಗೆ ಒಪ್ಪಿಕೊಳ್ಳಬೇಕು ಎಂದು ಸರಕಾರ ಒತ್ತಾಯಮಾಡಿದೆ. ಆದುದರಿಂದ ತಮ್ಮ ನೋಟೀಸಿಗೆ ನಾನು ಸಮ್ಮತಿ ಕೊಟ್ಟಿಲ್ಲ. ಅದರಮೇಲೆ ಮಾತನಾಡಬಾರದು Now the Calling Attention notice.

Calling Attention to Matters of Urgent Public Importance

(*i*) *re* : The removal of the foundation stone at Alamatti (Upper Krishna Project)

ಶ್ರೀ ಎಸ್. ಎಸ್. ಅರಕೇರಿ (ಬೆಳ್ಳೊಳ್ಳಿ).—ಆಲಮಟ್ಟಿ ಯೋಜನೆಗೆ ಶ್ರೀ ಲಾಲ್‌ಬಹದ್ದೂರು ಶಾಸ್ತ್ರಿಗಳು ಅಸ್ತಿಭಾರಶಿಲೆಯನ್ನು ಹಾಕಿದ್ದರು. ವಿಶ್ವಬ್ಯಾಂಕಿನವರು ಅಲ್ಲಿಗೆ ಭೇಟಿ ಕೊಟ್ಟಾಗ ಅಸ್ತಿಭಾರ ಶಿಲೆಯನ್ನು ತೆಗೆದುಹಾಕಲಾಗಿದೆ. ಅದರ ಸಲುವಾಗಿ ಸಾರ್ವಜನಿಕ ಪ್ರಾಮುಖ್ಯತೆ ಯುಳ್ಳ ಈ ವಿಷಯವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

† Sri D. PARAMESWARAPPA (Deputy Minister for Major Irrigation).—Sir, there is nothing mysterious or illegal about the removal of the foundation-stone.

Mr. SPEAKER.—The Hon. Deputy Minister may read the written statement, if he has one.

Sri D. PARAMESWARAPPA.—This written statement will satisfy my learned friend :

With a view to facilitating movement of vehicles for construction purposes, the foundation stone has been removed and preserved in the Stores of the Project. It is merely accidental that the preservation of the foundation stone in the Stores was made just at the time of the visit of the World Bank Team to the Project area.

The stone will be fixed at a suitable place after the construction of the dam is over.